Available online at www.elixirpublishers.com (Elixir International Journal)

Language and Testing

Elixir Lang. & Testing 82 (2015) 32605-32608

ISSN: 2229-712X

# Role of Sobane Words in Oral Heritage Literature
# ಮೌಖಿಕ ಪರಂಪರೆಯ ಸಾಹಿತ್ಯದಲ್ಲಿ ಸೋಬಾನೆ ಪದಗಳ ಪಾತ್ರ

Bullannavar Basusab ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ Govt First Grade College Gadag, Karnataka

**ARTICLE INFO**

**Article history:**
Received:11 March 2015;
Received in revised form:
27 April 2015;
Accepted: 15 May 2015;

**Keywords**
Tripadis – ತ್ರಿಪದಿಗಳು
Tribes – ಬುಡಕಟ್ಟು
Culture – ಸಂಸ್ಕೃತಿ
Sobane – ಸೋಬಾನೆ
Folk Song –ಜನಪದ ಹಾಡು

**ABSTRACT**

"Songs, narrative songs as they enter the tribal group from the village, "Sobane words sung by Siriajji, talikattva, agricultural ritual, birthing cradle in the act of weighing Sobane songs songs, narrative songs as they enter the tribal group from the village," Sobane words sung by Siriajji, talikattva, agricultural ritual, cradle to receive children. Sobane songs can be seen being used in weighing ceremonies.As the songs and narrative songs have entered the tribal group from the village, "Sobane words sung by Siriajji can be seen being used in Talikattu, farming rituals, weighing cradles to get children. In the folk tradition where beliefs are important, God is first. Vachanasahitya Bhaktipanth these philosophies have given knowledge about life to common people.

"ಗ್ರಾಮದಿಂದ ಬುಡಕಟ್ಟು ಗುಂಪನ್ನು ಪ್ರವೇಶಿಸುತ್ತಿದಂ್ವತೆ ಹಾಡುಗಳು, ಕಥನ ಗೀತೆಗಳು, "ಸಿರಿಯಜ್ಜಿ ಹಾಡುವ ಸೋಬಾನೆ ಪದಗಳು, ತಾಳಿಕಟ್ಟುವಿಕೆ, ಕೃಷಿ ಆಚರಣೆ, ತೂಗುವ ಕ್ರಿಯೆಯಲ್ಲಿ ತೊಟ್ಟಿಲು, ಸೋಬಾನೆ ಹಾಡುಗಳು, ಹಳ್ಳಿಯಿಂದ ಬುಡಕಟ್ಟು ಗುಂಪಿನೊಳಗೆ ಪ್ರವೇಶಿಸುವಾಗ ಕಥನ ಹಾಡುಗಳು, "ಸಿರಿಯಜ್ಜಿ ಹಾಡುವ ಸೋಬಾನೆ ಪದಗಳು, ತಾಳಿಕಟ್ಟು, ಕೃಷಿ ಆಚರಣೆ, ಮಕ್ಕಳನ್ನು ಬರಮಾಡಿಕೊಳ್ಳಲು ತೊಟ್ಟಿಲು. ಸೋಬಾನೆ ಹಾಡುಗಳು ತೂಕದ ಸಮಾರಂಭಗಳಲ್ಲಿ ಬಳಸುವುದನ್ನು ಕಾಣಬಹುದು. ಹಾಡುಗಳು ಮತ್ತು ಕಥನ ಗೀತೆಗಳು ಹಳ್ಳಿಯಿಂದ ಬುಡಕಟ್ಟು ಗುಂಪನ್ನು ಪ್ರವೇಶಿಸುತ್ತಿದಂ್ವತೆ, "ಸಿರಿಯಜ್ಜಿ ಹಾಡುವ ಸೋಬಾನೆ ಪದಗಳು ಸಾಧ್ಯ. ತಾಳಿಕಟ್ಟು, ಬೇಸಾಯ ಆಚರಣೆಗಳಲ್ಲಿ, ಮಕ್ಕಳನ್ನು ಪಡೆಯಲು ತೊಟ್ಟಿಲು ತೂಗುವುದನ್ನು ನೋಡಬಹುದು. ನಂಬಿಕೆಗಳೇ ಮುಖ್ಯವಾಗಿರುವ ಜನಪದ ಸಂಪ್ರದಾಯದಲ್ಲಿ ದೇವರಿಗೆ ಮೊದಲ ಸ್ಥಾನ. ವಚನಸಾಹಿತ್ಯ ಭಕ್ತಿಪಂತರ ಈ ತತ್ವಗಳು ಜನಸಾಮಾನ್ಯರಿಗೆ ಜೀವನದ ಜ್ಞಾನವನ್ನು ನೀಡಿವೆ

© 2015 Elixir All rights reserved.

**1. ಪೀಠಿಕೆ:**

ಕರ್ನಾಟಕದ್ಯಾಂತ ಮೊದಲು ಹಾಡಿಕೊಳ್ಳುವ ತ್ರಿಪದಿಗಳೆಂದರೆ ತಮ್ಮ ತಮ್ಮ ಗ್ರಾಮದೇವತೆಗಳನ್ನು ಕುರಿತು ನಂಬಿಕೆಗಳೇ ಮುಖ್ಯವೆನಿಸುವ ಜನಪದ ಪರಂಪರೆಯಲ್ಲಿ ದೇವರೇ ಮೊದಲು ಎರಡನೆಯದಾಗಿ ಹಾಡಿಕೊಳ್ಳುವ ಗೀತೆಗಳೆಂದರೆ ಭೂಮಿ ಸಂಬಂಧದ ಆಚರಣೆಯವು. ಉತ್ತರ ಕರ್ನಾಟಕದಲ್ಲಿ ಹಂತಿ ಪದಗಳಿಂದ ಹಿಡಿದು ದನ–ಕರುಗಳ ಅಲಂಕಾರದವರೆಗೆ ಹಾಡುಗಳಿದ್ದು, ದಕ್ಷಿಣ ಕರ್ನಾಟಕದಲ್ಲಿ ಸುಪ್ರಸಿದ್ಧವಾದ ಗೋವಿನ ಹಾಡನ್ನೇ ಸಂಕ್ರಾಂತಿಯ ದಿನ ಹಾಡಿಕೊಳ್ಳುವದುಂಟು. ಹಾಗೆಯೇ ಭೂಮಿ ಸಂಬಂಧದ ಗೀತೆಗಳು ವ್ಯಾಪಕವಾಗಿವೆ. ನಂಬಿಕೆಯಾಧರಿಸಿದ ಗ್ರಾಮದೇವತೆ ಮತ್ತು ಭೂಮಿಯ ವ್ಯವಸಾಯ ಕುರಿತು ಇರುವ ಜನಪದ ಹಾಡುಗಳನ್ನು ಬಿಟ್ಟರೆ ಜನಪದರಲ್ಲಿ ಹೆಚ್ಚು ಹಾಡಿಕೊಳ್ಳುವಂತಹುದು ಮದುವೆ ಸಂಬಂಧದ ಗೀತೆಗಳು ವಿವಾಹದಂತಹ ಸಂತಸಮಯ, ಮಂಗಳಕರ ಸಂದರ್ಭದಲ್ಲಿ ಹಾಡುವ ಪದಗಳನ್ನು ಗ್ರಾಮೀಣರು 'ಸೋಬಾನೆ ಪದ ಎಂದು ಕರೆದುಕೊಂಡಿರುತ್ತಾರೆ. 'ಇದು' ಶೋಭನ ಎಂಬ ಪದದಿಂದ ಬಂದದ್ದು. ಈ ಪದಕ್ಕೆ ಅರ್ಥಕೋಶಗಳಲ್ಲಿ ಶುಭ, ಮಂಗಳಕರ, ಹೊಳೆಯುವದು, ಪ್ರಕಾಶಮಾನವಾದ, ನಿಷೇಕ, ಪ್ರಸ್ತ ಎಂದಿದೆ.

**2. ವಿಷಯ:**

ಅನೇಕ ಸಂಸ್ಕೃತ ಪದಗಳು ಕನ್ನಡದಲ್ಲಿ ಶುದ್ಧ ಕನ್ನಡವೇ ಎಂಬಂತೆ ಅವು ಗ್ರಾಮ್ಯಸ್ವರೂಪ ಪಡೆದುಕೊಂಡು ಬಿಟ್ಟಿರುತ್ತವೆ. ನೆಲ ಸಂಸ್ಕೃತಿಯ ಬೇರು ಜಾನಪದ ಸಾಹಿತ್ಯವಾಗಿದೆ. ಜನಪದರ ಸೃಷ್ಟಿ ಜಾಣ್ಮೆಯ ಪ್ರತೀಕವಾಗಿ ಈ ಹಾಡುಗಳು ತಚನೆಗೊಂಡಿವೆ.

Tele: 8861814506
E-mail addresses:bullannavarbasusab@gmail.com

© 2015 Elixir All rights reserved.

**1. Introduction**

In Karnataka, the tripadis sung first are the beliefs about their respective village deities. In North Karnataka, there are songs ranging from Hanthi words to the decoration of cows and calves, while in South Karnataka, the well-known cow song is sung on the day of SankraAti. Also songs related to land are widespread. Apart from the folk songs about the village deity and farming of the land, the most sung among the folk are the wedding songs, which are sung on happy and auspicious occasions like marriage. 'It' comes from the word Shobhana. This word means auspicious, auspicious, shining, bright, bright, clear in the dictionaries.

**2. Content**

Many Sanskrit words remain in Kannada as pure Kannada as a dialect. Folk literature is the root of land culture. These songs have become a symbol of the creative ingenuity of the people. Uchchaya, Uchcheshravan, horse-Indra's horse, used as Uchcharaya.

ಶೋಭನ ಸಂಸ್ಕೃತ ಪದ ಗ್ರಾಮೀಣ ವಾತಾವರಣದಲ್ಲಿ ಸೋಬಾನೆ ಆಗಿದೆ. ಶಿಷ್ಟಸಂಸ್ಕೃತಿ ಜನಪದ ಪರಂಪರೆ ಸ್ವರೂಪದಲ್ಲಿ ಬೇರೆ ಬೇರೆ ಇದ್ದರೂ ಅವು ತಮ್ಮ ಬೇರಿನ ಆಳದಲ್ಲಿ ಪರಸ್ಪರ ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಸೋಬಾನೆ ಪದಗಳು ಮತ್ತು ಅವುಗಳ ಹಿನ್ನೆಲೆಯ ಆಚರಣೆಗಳು ಮೇಲ್ವರ್ಗದ ವಿವಾಹ ಕ್ರಮವನ್ನೇ ಅನುಸರಸಿದ್ದರೂ ಅಲ್ಲಲ್ಲಿ ಎರಡು ಸಮೂಹಗಳ ಆಚರಣೆಗಳು ಬೇರೆ ಬೇರೆಯೇ ಇರುತ್ತವೆ. ಈ ಸಂಕಲದಲ್ಲಿ ಕೊಡಲಾಗಿರುವಷ್ಟು ಸಿರಿಯಜ್ಜಿಯ ಸೋಬಾನೆ ಪದಗಳನ್ನು ಬಹುಶ: ಕರ್ನಾಟಕದ ಬೇರಾವ ಗಾಯಕಿಯೂ ಹಾಡಿರಲಾರಳು.

ಸಿರಿಯಜ್ಜಿ ಈ ತ್ರಿಪದಿಗಳನ್ನು ತಮ್ಮ ಕಾಡುಗೊಲ್ಲರ ಬುಡಕಟ್ಟು ಸಮುದಾಯ ಮದುವೆಯ ಸಂದರ್ಭದಲ್ಲಿ ಹಾಡುವಂತ ಸೋಬಾನೆ ಪದಗಳು ಎಂದೇ ಹೇಳುತ್ತಾರೆ. ಅದರಿಂದ ಈ ತ್ರಿಪದಿಗಳು ಬುಡಕಟ್ಟು ಸಮೂಹ ನಡುವೆ ಮಾತ್ರ ಹಾಡದೇ ಗ್ರಾಮೀಣ ಮದುವೆಯ ಸಂದರ್ಭದಲ್ಲೂ ಇದನ್ನೇ ಹಾಡುತ್ತಾರೆ. ಸಿರಿಯಲ್ಲಿ ಗ್ರಾಮೀಣ ವಾತಾವರಣದ ಹಾಡುಗಳನ್ನು ಕಲಿತುಕೊಡು ಬುಡಕಟ್ಟುಗಳಲ್ಲಿ ಅನೇಕ ಶುಭಕರ ಸಂದರ್ಭದಲ್ಲಿ ಹಾಡಿರುವದನ್ನು ಕಾಣಬಹುದು. ಬುಡಕಟ್ಟು ಸಮೂಹದ ಮದುಮಗಳು ತುಬ ಸರ, ಅಲ್ಲಿ ಪುರೋಹಿತರಾಗಲಿ, ಭಾಜಾ ಭಜಂತ್ರಿಗಳಾಗಲಿ, ಚಪ್ಪರ ಛತ್ರಗಳಾಗಲಿ ಇರುವುದಿಲ್ಲ. ಆದಿವಾಸಿಗಳಲ್ಲಿ ಬುಡಕಟ್ಟು ಹಿರಿಯನೇ ಮದುವೆಗೆ ಅಪ್ಪಣೆ ಕೊಡುವ, ಮುದುವೆಮಾಡಿಸುವ ಪುರೋಹಿತ ಹೆಣ್ಣಿಗೆ ತೆರಕೊಟ್ಟು ತರಬೇಕು. ಬುಡಕಟ್ಟು ಸಮೂಹದಲ್ಲಿ ಸ್ತ್ರೀಸ್ವಾತಂತ್ರ್ಯ ಹೆಚ್ಚು. ಗೌರವಾದರಗಳು ಹೆಚ್ಚಾಗಿ ಕಂಡು ಬರುತ್ತವೆ. ಅಲ್ಲಿ ಶ್ರೀಮಂತಿಕೆ ಮತ್ತು ಬಡತನದ ಪರಿಕಲ್ಪನೆಗಳು ಇರುವದಿಲ್ಲ. ಗ್ರಾಮ್ಯ ಮದುವೆಯ ಲಕ್ಷಣಗಳು ಸಿರಿಯಜ್ಜಿ ಹಾಡಿರುವ ಪದಗಳಲ್ಲಿವೆ.

<u>ಪುರೋಹಿತನ ಪ್ರಸ್ತಾಪ:</u>

"ಅಣ್ಣಾ ಆರುವರನ ಕೆನ್ನೆ ಮ್ಯಾಗಳ ಜುಟ್ಟು
ಅನ್ನೊಂದೆಳೆಯಾ ಜನಿವಾರ!
ಅನ್ನೊಂದೆಳೆಯಾ ಜನಿವಾರ!ಆರೋರಣ್ಣ
ಚಂದವಾಗಿ ಆಕೋ ಬ್ರಮ್ಮಗಂಟ!
ಅಪ್ಪ ಆರೋರಣ್ಣ ನೆತ್ತಿಮ್ಯಾಗಳ ಜುಟ್ಟು
ಇಪ್ಪತ್ತೊಂದೇಳೆಯಾ ಜನಿವಾರ!
ಇಪ್ಪತ್ತೊದೆಳೆಯಾ ಜನಿವಾರ!ಆರೋರಣ್ಣ
ವಪ್ಪವಾಗಿ ಆಕೋ ಬ್ರಮ್ಮಗಂಟ!
ವಜ್ಜರದ ಗಿಂಡಿ ತಿದ್ದುತಲಿ ಅಸನಾದಾವೆ
ಮುದ್ದುಮ ಮೋವನ್ನರು ನೆರೆತಾರೆ!
ಮುದ್ದು ಮೋವನ್ನರು ನೆರೆತಾರೆ!ಗಂಡಿನೋರು
ಗೆದ್ದೆವೆಂದು ದಾರೆಯೆರುದಾರೆ!.1

ಬುಡಕಟ್ಟು ವಿವಾಹ ಸಂದರ್ಭಗಳಲ್ಲಿ ಹೆಣ್ಣನ್ನೇ ಹುಡುಕಿಕೊಂಡು ತಿರುಗಬೇಕು. ಆದರೆ ಪುರುಷ ಪ್ರಧಾನ ಸಮೂಹದ ವಾಕ್ಯಗಳು ಪುರೋಹಿತನ ಪ್ರವೇಶ ಸಿರಿಯಜ್ಜಿಯ ಹಾಡುಗಳಲ್ಲಿವೆ. ಹೀಗಾಗಿ ಸಿರಿಯಜ್ಜಿ ಹಾಡಿರುವ ಅನೇಕ ಗೀತೆಗಳು, ಕಥನ ಗೀತೆಗಳು ಗ್ರಾಮದಿಂದ ಬುಡಕಟ್ಟು ಸಮೂಹವನ್ನು ಪ್ರವೇಶಿಸಿರುವಂತೆ ತೋರುತ್ತವೆ. ಸಿರಿಯಜ್ಜಿ ತನ್ನ ಸ್ವಂತ ಆಸಕ್ತಿಯ ಮೇಲೆ ಅನೇಕರಿಂದ ಹಾಡು ಕಲಿತ ಕಾರಣ ಬುಡಕಟ್ಟಿನ ವೀರರ ಮತ್ತು ಸತಿಯರ ಕಥಾನಕಗಳು ಆಕೆಯ ನೆನಪಿನಲ್ಲಿವೆ. "ಸಿರಿಯಜ್ಜಿ ಹಾಡಿರುವ ಸೋಬಾನೆ ಪದಗಳು ಈಗಲೂ ಕಾಡುಗೊಲ್ಲರ ಮದುವೆಗಳಲ್ಲಿ ಮೂರು ದಿನವೂ ಹಾಡಲ್ಪಡುತ್ತವೆ. ಇಡೀ ಮದುವೆ ಸಡಗರ, ಸಂಭ್ರಮ ಗ್ರಾಮೀಣ ಸಂಸ್ಕೃತಿಯ ಅನಾವರಣ ಇಲ್ಲಿ ದಟ್ಟವಾಗಿ ಕಂಡುಬರುತ್ತದೆ. ವಧು–ವರರು ಹಾರಹಾಕುವ ಸಂದರ್ಭದಿಂದ ಹಿಡಿದು ತಾಳಿಕಟ್ಟುವ, ವ್ಯವಸಾಯದ ಆಚರಣೆ, ಮಕ್ಕಳನ್ನು ಪಡೆಯುವ ತೊಟ್ಟಿಲು ತೂಗುವ ಕ್ರಿಯಗಳಲ್ಲಿ ಸೋಬಾನೆ ಹಾಡುಗಳು ಪ್ರಚಲಿತದಲ್ಲಿರುತ್ತವೆ.2

ಸಿರಿಯಜ್ಜಿ ಹಾಡಿರುವ ಸೋಬಾನೆ ಪದಗಳಲ್ಲಿ ಶಿಷ್ಟ ಸಂಸ್ಕೃತಿಯ ಮದುವೆಯ ವಿಧಿ ವಿಧಾನಗಳು ಇಲ್ಲ. ಕಾಡುಗೊಲ್ಲರ ಮದುವೆಗಳಲ್ಲಿ ಹಸೆ ಬರೆಯುವ ಸಂಪ್ರದಾಯ ಬಹುಮುಖ್ಯವಾದುದು. ಹಾಡುಗಳನ್ನು ಹಾಕುವವರು ಮಹಿಳೆಯರು, ಪುರುಷರು ಮತ್ತು ಮಕ್ಕಳು, ಕೆಲವು ವೇಳೆ ಮಹಿಳೆಯರು, ಪುರುಷರು ಸೇರಿ ಹಾಡುವುದುಂಟು. ಉದಾಹರಣೆಗೆ ಭಜನೆ, ತತ್ವಪದಗಳು, ದೊಂಬಿದಾಸರ ಹಾಡು, ತೊಗಲು ಗೊಂಬೆಯಾಟದ ಹಾಡು, ಸೋಬಾನೆ ಹಾಡುಗಳು, ಲಂಬಾಣಿಗರ ಹಾಡುಗಳು ಪ್ರೇಮಗೀತೆ, ಲಾವಣಿಗಳು, ಚೌಡಿಕೆ ಹಾಡು ಮುಂತಾದವು. ಮಹಿಳೆಯರೇ ಹಾಡುವ ಗೀತೆಗಳೆಂದರೆ, ಜೋಗುಳ, ದೂರಿ ಹಾಡು, ಭಕ್ತಿಗೀತೆ, ಪ್ರಕೃತಿಗೀತೆ, ತವರಿನಹಾಡು, ಬೀಸುವ ಕುಟ್ಟುವ ಹಾಡುಗಳು, ಕೊಂತಿ ಪೂಜೆಹಾಡು,

Shobhana is the Sanskrit word sobane in the rural setting. Civilized culture and folk heritage are different in nature but they are related to each other in the depth of their roots. Although the Sobane terms and their background rituals follow the same upper caste marriage order, the rituals of the two groups differ from place to place. Probably no other singer from Karnataka could have sung Siriajji's sobane words as given in this collection.

Siriajji says these tripadis are the sobane words sung by his Kadugollar tribal community at weddings. Because of this, these tripadis are not only sung among tribal groups but are also sung at rural weddings. Learn the songs of rural atmosphere in Siri which are sung on many auspicious occasions among the tribals. Tribal brides are Tuba Sara, where there are no priests, Bhaja Bhajantris or Chappara Chatras. Among the tribals, it is the tribal elder who orders the marriage and the priest who conducts the marriage should bring the woman. Independence is high in tribal groups. Honorifics are often found. There are no concepts of wealth and poverty. The features of a vernacular marriage are present in the words sung by Siriajji.

Priest's Proposal:

"Anna Aaruvara's Kenne Myagal Juttu
AnnodeleyacJaniwara!
Annodeya Janiwara!Aroranna
Well done Brammaganta!
Father Aroranna is a hair of the scalp
Twenty one thread Janiwara!
Twenty one thread Janivar! Aroranna
Vappaga Ako Brammaganta!
Vajra Gindi Tiduthali Asanadave
Mudduma Movanna Neretare!
Muddu Movannaru Neretare!Gandinoru
We have won A is the way! 1

In tribal marriage occasions, the woman should be searched for. But the verses of Purusha Predominant group are in Purohita's entry Siriajji's songs. Thus many of the songs and narrative songs sung by Siriajji seem to have entered the tribal community from the village. As Siriaji learned the song from many on her own interest, she remembers the stories of tribal heroes and satis. "The Sobane words sung by Siriajji are still sung for three days in Kadugollar weddings. The entire wedding ceremony, the unveiling of the rural culture can be seen thickly here. The Sobane songs are prevalent in the ceremony of garlanding the bride and groom, the ritual of agriculture, the weighing of the cradle to get children.2

The Sobane lyrics sung by Siriajji do not have the wedding rituals of civilized culture. The tradition of writing hase is very important in Kadugollar marriages. The singers are women, men and children, sometimes women and men sing together. For example Bhajans, Tattupadas, Dombidasa's song, leather puppetry song, Sobane songs, Lambanigar songs love song, ballads, Chaudike song etc. Songs sung by women are Jogula, Dhuri song, Bhakti song, Nature song, Thavarina song, Bisuva Kuttuwa songs, Konti Puje song, Udyattatu, God songs, Maramma songs, Nathi song, Kalekeeluva song, Geegi words, Sobane songs, Koravanji, Gauramma song, Nageshi Lavani song. etc. "Women's songs can be divided into North Karnataka, South Karnataka, Coastal region women's songs, tribal songs. These have got their own specialty and uniqueness and are still playing in the tongue of the people.3

ಉದ್ಯತ್ತಾಟು, ದೇವರ ಹಾಡುಗಳು, ಮಾರಮ್ಮನ ಹಾಡುಗಳು, ನಾತಿ ಹಾಡು, ಕಳೆಕೀಳುವ ಹಾಡು, ಗೀಗೀ ಪದಗಳು, ಸೋಬಾನೆ ಹಾಡುಗಳು, ಕೊರವಂಜಿ, ಗೌರಮ್ಮನ ಆಡಿಸುವ ಹಾಡು, ನಾಗೇಶಿ ಲಾವಣಿಹಾಡು, ಪಾತ್ರದವರ ಹಾಡು, ಒಕ್ಲಿಗರ ಹಾಡು, ಉತ್ಸವದ ಹಾಡು, ಗುಳ್ಳಪ್ಪನ ಹಾಡು, ಬುಲಾಯಿ ಹಾಡು, ಜೋಕುಮಾರ ಹಾಡು ಮುಂತಾದವುಗಳು. "ಮಹಿಳೆಯರ ಹಾಡುಗಳನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಪ್ರದೇಶದ ಮಹಿಳೆಯರ ಹಾಡು, ಗಿರಿಜನರ ಹಾಡುಗಳು ಎಂದು ವಿಂಗಡಿಸಬಹುದು. ಇವುಗಳು ತಮ್ಮದೇ ಆದ ವಿಶೇಷತೆ ಹಾಗೂ ವೈಶಿಷ್ಟತೆಯನ್ನು ಪಡೆದುಕೊಂದು ಜನಮನಸರ ನಾಲಗೆಯಲ್ಲಿ ಇಂದಿಗೂ ನಲಿದಾಡುತ್ತಿವೆ.3

ಸೋಬಾನೆ ಹಾಡುಗಳು ಗಂಡು–ಹೆಣ್ಣುಗಳಿಗೆ ಅವರ ಮುಂದಿನ ಬಾಳಿಗೆ ಮಾರ್ಗ ತೋರುವ ವಿಷಯಗಳನ್ನೊಳಗೊಂಡಿವೆ. ಗಂಡು ಜಾಗೃತಿ ಅರಿವನ್ನು ಮೂಡಿಸುವ ಆದರ್ಶದ ಬಾಲಿಗೆ ಮಾರ್ಗದರ್ಶನ ಮಾಡುವ ವಿಷಯ ವಸ್ತು ಒಳಗೊಂಡಿವೆ. ಶುಭ ಕಾರ್ಯಗಳಾದ ಮದುವೆ, ಹೆಣ್ಣು ಮೈನೆರೆದ ಸಂದರ್ಭ ಪ್ರಸ್ತ ಇಂತಹ ಸಂದರ್ಭಗಳಲ್ಲಿ ಹಾಡುವ ಹಾಡುಗಳಿಗೆ ಸೋಬಾನೆ ಪದಗಳೆಂದು ಹೆಸರು. ಸಂದರ್ಭಕ್ಕೆ ತಕ್ಕುದಾದ ಹಾಡುಗಳನ್ನು ಮಾತ್ರ ಇಲ್ಲಿ ಹಾಕುತ್ತಾರೆ. ವಿಷಯ ವಸ್ತುವಿನ ವೈವಿಧ್ಯತೆಯು ಇಲ್ಲಿ ಪ್ರಮುಖವಾಗಿದೆ.

ಮದುವೆಗಳು ಹಿಂದೆ 5–6 ದಿನ ನಡೆಯುತ್ತಿದ್ದವು. ಆಗ ಹಲವಾರು ಶಾಸ್ತ್ರಗಳನ್ನು ಮಾಡುತ್ತಾ ಹಾಡುಗಳನ್ನು ಹೇಳುತ್ತಿದ್ದರು. ಅಷ್ಟು ದಿನವೂ ಶುಭಕರವಾದ ಸನ್ನಿವೇಶ, ಧಾರ್ಮಿಕ ಆಚರಣೆ, ಶಾಸ್ತ್ರಗಳ ಪರಿಪಾಲನೆಗಾಗಿ ಸೋಬಾನೆ ಹಾಡುಗಳನ್ನು ಹಾಕುತ್ತಿದ್ದರು. ನಮ್ಮ ಜನಪದರು ಇವು ಒಂದು ರೀತಿಯಲ್ಲಿ ಮಂತ್ರಗಳೆಂದೇ ಭಾವಿಸಿದ್ದರು. ಹಾಡಿನ ರೂಪದ ಶಾಸ್ತ್ರಗಳೇ ಸೋಬಾನೆ ಪದಗಳಾದವು. ಒಂದೊಂದು ಶಾಸ್ತ್ರಕ್ಕೂ ಒಂದೊಂದು ರೀತಿಯ ಹಾಡುಗಳುಂಟು. ಅವುಗಳ ಧಾಟಿಗಳು ಬೇರೆ ಬೇರೆ ಇರುವುದನ್ನು ಜನಪದರು ಸೂಕ್ಷ್ಮವಾಗಿ ಗ್ರಹಿಸಿದ್ದರೆಂಬುದು ನಮಗೆ ಈ ಹಾಡುಗಳಿಂದ ಕಂಡುಬರುತ್ತದೆ. ಸೋಬಾನೆ ಉದ್ದೇಶ ಹೆಣ್ಣು–ಗಂಡುಗಳಿಗೆ ಒಳ್ಳೆಯದಾಗಲೆಂದು ಸಂಸಾರ ಸುಖವಾಗಿರಬೇಕು ಎಂಬ ಉದ್ದೇಶದಿಂದ ನಮ್ಮ ಜನಪದರು ಹಾಡುತ್ತಾ ಬಂದರು. ಶಾಸ್ತ್ರೋಕ್ತವಾಗಿ ಆದ ಮದುವೆಯನ್ನು ಮುರಿಯಲು ಸಾಧ್ಯವಿಲ್ಲ. ಗಂಡು–ಹೆಣ್ಣುಗಳ ಪರಿಚಯವಾಗಲು ಇವೆಲ್ಲ ಶಾಸ್ತ್ರಗಳು ಹಂತ ಹಂತವಾಗಿ ಬಂದವು.

ಹಿಂದೆ ಚಿಕ್ಕ ವಯಸ್ಸಿಗೆ ಮದುವೆ ಮಾಡುತ್ತಿದ್ದರು. ಆಗ ಅವರಲ್ಲಿ ಆತ್ಮೀಯತೆ ಬೆಳೆಯಲಿ ಎಂಬ ಉದ್ದೇಶದಿಂದ ಐದಾರು ದಿನಗಳು ಮದುವೆ ಮಾಡುತ್ತಿದ್ದರು. ದೇವರೂಟ, ಚಪ್ಪರ, ಸ್ತಂಭ ಮುಹೂರ್ತಧಾರೆ ದೇವರು ತರುವದು, ಬೀಗರೂಟ, ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವುದು. ಹೀಗೆ ಹಲವಾರು ದಿನ ಸಂತಸ, ಉಲ್ಲಾಸದಿಂದ ಮದುವೆ ಸಾಗುತ್ತಿತ್ತು. ಮದುವೆಯ ಅಂಗವಾಗಿ ಹಲವಾರು ಶಾಸ್ತ್ರಗಳಾದ ದೇವೆ ತರುವುದು, ನೀರು ತುಂಬುವುದು ಭತ್ತ ಕುಟ್ಟುವುದು, ಅರಿಷಿಣ ಹಚ್ಚುವದು, ಎಣ್ಣೆ ಹಚ್ಚುವದು, ವೀಳ್ಯಶಾಸ್ತ್ರ, ಬಾಸಿಂಗ, ಕಂಕಣ ಕಟ್ಟುವದು, ಚಂಡಾಟ, ಓಕುಳಿಯಾಟ, ಹೆಣ್ಣು ಒಪ್ಪಿಸುವುದು ನಾಗೋಟೆಶಾಸ್ತ್ರ ಮುಂತಾದ ವೇಳೆ ನಡೆವ ಶಾಸ್ತ್ರಗಳಲ್ಲಿ ಸೋಬಾನೆ ಹಾಡುಗಳು ಕೇಳಿಬರುತ್ತವೆ. "ಸೋಬಾನೆ ಹಾಡುಗಳನ್ನು ಸಾಮಾನ್ಯವಾಗಿ ಬರೀ ಹೆಂಗಸರೇ ಹಾಡುವರು. ಅಪರೂಪವೆಂಬಂತೆ ಗಂಡಸರು ಹಾಡುತ್ತಾರೆ. ಆಯಾ ಜಾತಿಯ ಮದುವೆಯಲ್ಲಿ ಆಯಾ ಜಾತಿಯ ಹೆಂಗಸರು ಹಾಡುವರು. ಕೆಲ ವೇಳೆ ಒಂದು ಜಾತಿಯವರು ಇನ್ನೊಂದು ಜಾತಿ ಮದುವೆಲಿ ಹಾಡುವದುಂಟು.4

ಸೋಬಾನೆ ಹಾಡುಗಳು ಬಾಯಿಂದ ಬಾಯಿಗೆ ಬಂದವು. ಇದರ ಮೂಲ ಕತೃ ಯಾರು ಎಂಬುದು ತಿಳಿಯದು. ಇದು ಒಬ್ಬರಿಂದ ಅಥವಾ ಹಲವಾರು ಜನರಿಂದ ಸೃಷ್ಟಿಯಾಗಿದೆ. ಎಚ್. ಎಲ್. ನಾಗೇಗೌಡರು 17–18ನೇ ಶತಮಾನದಲ್ಲಿ ತ್ರಿಪದಿ ಜನಿಸಿದಾಗ ಈ ಸೋಬಾನೆ ಪದಗಳು ಜನಿಸಿವೆ ಎಂದು ಹೇಳುತ್ತಾರೆ. ಮೌಖಿಕ ಪರಂಪರೆಯ ಅಭಿವ್ಯಕ್ತಿಯ ಸಾಧನವಾಗಿ ಇಂದಿಗೂ ತನ್ನ ಮೌಲ್ಯ, ಘನತೆಯನ್ನು ಈ ಹಾಡುಗಳು ಪಡೆದಿವೆ.

ಸೋಬಾನೆ ಚಿಕ್ಕಮ್ಮ ಹೇಳುವಂತೆ ಇವು ಶಿವಪಾರ್ವತಿಯರ ಮದುವೆ ಆದಾಗ ಹುಟ್ಟಿದವು. ಹಿಂದೆ ಮದುವೆಗಳಲ್ಲಿ ಸೋಬಾನೆ ಹಾಡಲೇಬೇಕಾಗಿತ್ತು. "ದೇವ ಪೂಜೆ, ದೇವರೂಟದಿಂದ ಮದುವೆ ಆರಂಭ ಚಪ್ಪರದ ದಿನ ಸ್ತಂಭ ಮಹೂರ್ತ, ಗಂಗೆ ತರುವಾಗ "ಸೋಬಾನವೆಲ್ಲ ಶಿವನಿಗೆ" ಎಂದು ಮೊದಲು ಸೋಬಾನೆ ಪದ ಆರಂಭಿಸುತ್ತಾರೆ. ಕಳಸ, ಹಿಡಿದು ಕನ್ನಡಿ ತಂದು ಗಂಗೆ ನೀರನ್ನು ಹಂಡೆಗೆ ಹೊಯ್ಯುವರು. ಮುಂದೆ ಈ ನೀರನ್ನೇ ಎಲ್ಲಾ ಶಾಸ್ತ್ರಗಳಿಗೂ ಉಪಯೋಗಿಸುವರು.5

ಶಾಸ್ತ್ರದ ನೀರು ತಂದ ಮೇಲೆ ಭತ್ತ ಕುಟ್ಟುತ್ತಾರೆ. ಮುತ್ತೈದೆಯರು ಹೆಣ್ಣಿಗೆ ಬಳೆಶಾಸ್ತ್ರಮಾಡಿ ಅರಿಷಿಣ, ಎಣ್ಣೆಹಚ್ಚುವ ಶಾಸ್ತ್ರ ಮಾಡುತ್ತಾರೆ.ಹಸೆ ಬರೆದು ಹಾಡಿ, ಕೆನ್ನೆ, ತೋಳು, ಕೈಕಾಲುಗಳಿಗೆ ಅರಳೆಣ್ಣೆಗೆ ಅರಿಷಿಣ ಬೆರೆಸಿ,

Sobane songs contain themes that guide men and women to their future lives. Contains material that guides the ideal boy to create male awareness. Songs sung on auspicious occasions such as marriage, marriage of a girl are known as sobane pada. Only songs suitable for the occasion are put here. Diversity of content material is key here.

Marriages used to take place for 5-6 days. At that time, he used to perform many rituals and sing songs. Even on that day, Sobane used to sing songs for auspicious situations, religious rituals, observance of Shastaç. Our people thought that these were like mantras. The shastaçs of the song form became the sobane words. Each Shasta has its own type of songs. We can see from these songs that the people have sensitively understood that their dhatis are different. Our people came singing with the intention of Sobane intention to be good for both men and women and for the family to be happy. Legal marriage cannot be dissolved. All these shastaçs came step by step to introduce male and female.

Earlier they used to get married at a young age. Then they used to get married for five or six days with the intention of growing intimacy between them. Devaruta, Chappara, Sambha Muhurtdhare is brought by God, Bigaruta, sending the woman to her husband's house. Thus, the marriage went on happily for several days. Sobane songs are heard in the various shastas that are performed as part of the marriage, such as fetching the god, filling water, cooking rice, applying turmeric, applying oil, beelyasasta, basinga, tying bracelets, chantada, okuliyata, handing over the girl to nagotesasta. "Sobane songs are usually sung only by women. Rarely, men sing. Women of each caste sing in weddings of each caste. Sometimes one caste sings in another caste's wedding. 4

Sobane's songs came from word of mouth. Its original author is not known. It is created by one or several people. H. L. Nagegowda says that these Sobane words were born in the 17th-18th century when Tripadi was born. These songs still hold their value and dignity as a means of expressing oral heritage

According to Sobane aunty these were born when Shivaparvati got married. Earlier, sobane had to be sung in weddings. "Deva Puja, Marriage starts with Devaruta, Stamba Mahurta on the day of Chappara, while bringing Ganges, they first start with Sobane Pada saying, "Sobanavella for Shiva". They bring a kalasa, a mirror and carry Ganges water to the bank. Later, this water is used for all Shastas.

They eat rice after bringing holy water. The elders make bracelets for women and apply turmeric and oil. He writes a poem and sings it, rubs turmeric with rose oil on his cheeks, arms, hands and feet, takes a bath with a reed and puts a cup on it and blesses it. On that occasion, Mutaidei sings Sobane songs. Even when a man comes to a woman's house, he sings to pass the way. Both parties come to the male-female house singing sobane with the instrument of olaga. This is how girls say their names on Nagole's day.

"I am a donkey."
It goes on and on
He looks around
Give me a kiss and laugh" Sunnappanoru. 6

The man's answer is-
There is no need to say
Do not stop doing it
Even if the machali brought home is knocked
No profanity left-Rangi-everyone laughs+

ತೀಡಿ ಸ್ನಾನ ಮಾಡಿಸಿ ಸೇಸೆ ಹಾಕಿ ಆಶೀರ್ವಾದ ಮಾಡುತ್ತಾರೆ.ಆ ಸಂದರ್ಭದಲ್ಲಿ ಮುತ್ತೈದೆಯರು ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಹೆಣ್ಣಿನ ಮನೆಗೆ ಗಂಡು ಬರುವಾಗಲೂ ದಾರಿ ಸಾಗಲೆಂದು ಹಾಡುವರು. ಗಂಡು–ಹೆಣ್ಣಿನ ಮನೆಗೆ ಎರಡು ಕಡೆಯವರೂ ಸೋಬಾನೆ ಹಾಡುತ್ತಾ ಓಲಗದ ವಾದ್ಯದೊಡನೆ ಬರುತ್ತಾರೆ. ನಾಗೋಲೆಯ ದಿನ ಹೆಸರು ಹೇಳುವಾಗ ಹೆಣ್ಣುಮಗಳು ಹೀಗೆ

"ಕತ್ತೆ ಅಂತ ಬಯ್ಯುತಾನೆ
ಮತ್ತ ಮುಂದಕ ಕರಿತಾನೆ
ಸುತ್ತ ಮುತ್ತ ನೋಡ್ತಾನೆ
ಮುತ್ತು ಕೊಟ್ಟು ನಗ್ತಾನೆ" ಸಣ್ಣಪ್ಪನೋರು.6

ಗಂಡು ಹೇಳುವ ಉತ್ತರದ ಧಾಟಿ–

ಹೇಳೋದು ಕೇಳಾಂಗಿಲ್ಲ
ತಾ ಮಾಡೋದು ಬಿಡೋಂಗಿಲ್ಲ
ಮನೆಗೆ ತಂದ ಮಚ್ಚಲಿ ಬಡಿದರೂ
ಮಾನಗೇಡಿತನ ಬಿಟ್ಟಿಲ್ಲ–ರಂಗಿ–ಎಲ್ಲ ನಗುವರು+

**3. ಸಮಾರೋಪ**

ಹೀಗೆ ಸೋಬಾನೆ ಪದಗಳು ವಿಶಿಷ್ಟವೂ ವಿಶೇಷವಾದವುಗಳಾಗಿ ಇಂದಿಗೂ ಬಳಕೆಯಾಗುತ್ತಿರುವದನ್ನು ಕಾಣಬಹುದು. ಹಾಸ್ಯ ವಿಡಂಬನೆಯ ಜೊತೆಗೆ ಮನರಂಜನೆಯನ್ನು ನೀಡುವಲ್ಲಿ ಯಶಸ್ಸು ಸಾಧಿಸಿವೆ. ಅನೇಕ ಸಂಪ್ರದಾಯ, ಆಚರಣೆ, ಧಾರ್ಮಿಕ ವಿಧಿ ವಿಧಾನ, ವಿಶೇಷ ಸಂದರ್ಭಗಳಲ್ಲಿ ಬಳಕೆಯಾಗುವ ಸೋಬಾನೆ ಪದಗಳು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಜನಜನಿತವಾಗಿವೆ. ಇವುಗಳನ್ನು ಹಾಡುವವರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು ಶ್ಲಾಘನೀಯವಾದುದು. ಉತ್ತರ ಕರ್ನಾಟಕದ ತುಂಬೆಲ್ಲಾ ಹೆಚ್ಚಾಗಿ ಕಂಡು ಬರುತ್ತದೆ.

**4. ಪರಾಮರ್ಶನ ಗ್ರಂಥಗಳು:**


೧. ಸೋಬಾನೆ ಪದಗಳು –ಡಾ. ಎ. ಎಲ್. ನಾಗೇಗೌಡ
೨. ಜನಪದ ಸಾಹಿತ್ಯ – ಡಾ. ಕಿಂಬಳಿಕೆ ಹಿರಿಯಣ್ಣ
೩. ಜನಪಡ ಶೋಧ – ಡಾ. ದೇಜಗೌ
೪. ಜನಪೆ ಜೋಶಿ – ಡಾ. ಪಿ. ರಾಜಶೇಖರ
೫. ಜನಪದ ಸಾಹಿತ್ಯ – ಅಕಾಡೆಮಿ ಪ್ರಕಟಣಗಳು
೬. ಜನಪದ ಸಂಶೋಧನೆಯ ಹೊಸ ಸಾಧ್ಯತೆಗಳು – ಡಾ. ಟಿ. ಗೋವಿಂದರಾಜು ಮೈ.ವಿ.ವಿ.


**3. Conclusion**

Thus Sobane words are seen as unique and special in use even today. They have succeeded in providing entertainment along with comedy and satire. Sobane words used in many traditions, rituals, rituals and special occasions are popular in rural areas even today. It is commendable that those who sing these have continued this legacy. It is found mostly in North Karnataka.

**Reference Books**


1. Sobane words -Dr. A. L. Nagegowda
2. Folk literature - Dr. Kimbalki Hirianna
3. Janapada Shodha - Dr. Dejgau
4. Janape Joshi - Dr. P. Rajasekhara
5. Folklore - Academy Publications
6. New possibilities of folklore research - Dr. T. Govindaraju My.V.V.